**ಮರು ಪ್ರಮಾಣೀಕರಿಸಲಾದ ದಿನಾಂಕ: 08.06.2026.**

**ಪಾಟೀ ಸವಾಲು : ವಾದಿ ಪರ ಶ್ರೀ.K.N.G ವಕೀಲರಿಂದ :-**

ವಾದಿಯ ಪರಿಚಯ ನನಗಿಲ್ಲ. ನಾನು ಈಗ ಗೃಹಿಣಿಯಾಗಿದ್ದೇನೆ. ಈ ಹಿಂದೆ ಶಿಕ್ಷಕಿಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ವಾದಿಯು ಈ ಪ್ರಸ್ತುತ ದಾವೆಯನ್ನು ಅವರು ಓಡಾಡಲು ದಾರಿ ಬೇಕು ಎಂದು ಹೇಳಿ ದಾವೆಯನ್ನು ಹೂಡಿರುತ್ತಾರೆ. ವಾದಿಯು ಓಡಾಡಲು 2 ಐಟಂ ನ ಮೇಲೆ ದಾವೆಯನ್ನು ಹೂಡಿರುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣವು ಪೂ-ಪಃ 17, ಉ-ದಃ 53 ½ ಅಡಿ ಇರುತ್ತದೆ. ಪೂರ್ವಕ್ಕೆ - ರಾಘವೇಂದ್ರ ಸ್ವಾಮಿ ಮಠ, ಪಶ್ಚಿಮಕ್ಕೆ - ರೇವಣ್ಣ ಸಿದ್ಧಪ್ಪನವರ ಜಾಗ, ಉತ್ತರಕ್ಕೆ - ರಸ್ತೆ, ದಕ್ಷಿಣಕ್ಕೆ - ವಾದಿ ಹಾಗೂ ನಮಗೆ ಸೇರಿದ ಜಂಟಿ ಗೋಡೆ ಬರುತ್ತದೆ. ವಾದಿಯು 2ನೇ ಐಟಂನ ಸ್ವತ್ತನ್ನು ಶೌಚಾಲಯಕ್ಕೆ ಎಂದು ಹೇಳಿ 3 ಅಡಿ ಅಗಲದಷ್ಟು ಜಾಗವನ್ನು ಕೇಳಿದ್ದು ಸದರಿ ಜಾಗವು ನಮ್ಮ ಸ್ವತ್ತಿನಲ್ಲೇ ಬರುತ್ತದೆ. ದಾವಾ ಆಸ್ತಿಗಳ ಖಾತಾ ನಂಬರ್ ನನಗೆ ಸರಿಯಾಗಿ ನೆನಪಿರುವುದಿಲ್ಲ. 3 ಮತ್ತು 4ನೇ ಪ್ರತಿವಾದಿಗಳ ತಂದೆ ಹಾಗೂ ವಾದಿಯ ತಂದೆಯು ಸಹೋದರರು ಎಂದರೆ ಸರಿ. ಈ ಹಿಂದೆ ದಾವಾ ಆಸ್ತಿಗಳು 2 ರಿಂದ 4ನೇ ಪ್ರತಿವಾದಿಗಳ ತಂದೆಯ ಒಟ್ಟು ಕುಟುಂಬದ ಸ್ವತ್ತಾಗಿತ್ತು ಎಂದರೆ ಸರಿ. ನಾನು ಮಹಾಲಿಂಗಪ್ಪನವರ ಭಾಗಾಂಶವನ್ನು ಖರೀದಿ ಮಾಡಿರುತ್ತೇನೆ. ಮಹಾಲಿಂಗಪ್ಪನವರಿಗೆ ವಿಭಾಗದ ಮುಖಾಂತರ ಅವರಿಗೆ ಸದರಿ ಆಸ್ತಿಯು ಬಂದಿತ್ತು ಎಂದು ತೋರಿಸುವುದಕ್ಕೆ ಯಾವುದೇ ಪತ್ರವನ್ನು ನಮಗೆ ತೋರಿಸಿರುವುದಿಲ್ಲ. ಆದರೆ ಮೌಖಿಕವಾಗಿ ನುಡಿದಿರುತ್ತಾರೆ. ದಾವಾ ಆಸ್ತಿಗಳ ಅಳತೆಗಳನ್ನು ನಾವು ಮಾಡಿಸಿರುತ್ತೇವೆ. ಸದರಿ ವರದಿಯನ್ನು ಅವರು ನೀಡಿರುತ್ತಾರೆ. ನಮ್ಮ ಬಳಿ ಇದ್ದಂತಹ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಸಮಕ್ಷಮದಲ್ಲಿ ಯಾವುದೇ ಅಳತೆಯನ್ನು ಮಾಡಿಸಿರುವುದಿಲ್ಲ. ನಾನು ಖರೀದಿ ಮಾಡಿರುವ ಮುನ್ನ ಅದರ ಅಳತೆಯಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ನಗರಸಭೆಯಿಂದ ಅಳತೆಯಾಗಿದೆ ಎಂದು ಹೇಳಲಾದ ಸಮಯದಲ್ಲಿ ವಾದಿಯರಿಗೆ ನೋಟೀಸನ್ನು ನೀಡಿದ್ದರ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತು ಹಾಗೂ

ವಾದಿಯ ಸ್ವತ್ತು ಅಕ್ಕಪಕ್ಕದಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಮುಂದುವರೆದು ವಾದಿಯು ಅವರ ಸ್ವತ್ತಿಗೆ ಇರುವಷ್ಟು ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದು ಈಗ ನಮ್ಮ ಸ್ವತ್ತಿನಲ್ಲಿ ದಾರಿ ಬೇಕು ಎಂದು ದಾವೆಯನ್ನು ಹೂಡಿರುತ್ತಾರೆ. ವಾದಿಯ ಸ್ವತ್ತು ಹಾಗೂ ನೀವು ಖರೀದಿ ಮಾಡಿದ್ದೀರ ಎಂದು ಹೇಳಲಾದ ಸ್ವತ್ತುಗಳ ಪರಿಶೀಲನೆ ಹಾಗೂ ಅಳತೆಯನ್ನು ನ್ಯಾಯಾಲಯದ ಕಡೆಯಿಂದ ಆಯುಕ್ತರನ್ನು ನೇಮಕ ಮಾಡಿಸಿದ್ದಲ್ಲಿ ನನ್ನದು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಂಜಪ್ಪ ಹಾಗೂ ಮಹಾಲಿಂಗಪ್ಪನವರ ನಡುವೆ ಆದಂತಹ ವಿಭಾಗದಲ್ಲಿ ಏನೆಲ್ಲಾ ಷರತ್ತುಗಳು ಇದೆ ಎಂಬುದನ್ನು ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನನ್ನ ಯಜಮಾನರು ನೋಡಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಖರೀದಿ ಮಾಡುವ ಸಮಯದಲ್ಲಿ ಮಹಾಲಿಂಗಪ್ಪನವರಿಗೆ ಸ್ವತ್ತು ಬಂದಿರುವ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿ ಹಾಗೂ ಮಹಾಲಿಂಗಪ್ಪನವರ ಸ್ವತ್ತುಗಳಿಗೆ ಸಂಬಂಧಪಟ್ಟ ಹಾಗೇ ಯಾವ ದಾಖಲಾತಿ ಹಾಗೂ ಅದಕ್ಕೆ ಸಂಬಂಧಪಟ್ಟ ವಿಸ್ತೀರ್ಣ ಚೆಕ್ಕುಬಂದಿಯನ್ನು ನೀವು ಪರಿಶೀಲಿಸಿ ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚೆಕ್ಕುಬಂದಿಯನ್ನು ತೋರಿಸುವಂತಹ ಯಾವುದೇ ದಾಖಲಾತಿ ನಮ್ಮ ಬಳಿ ಇಲ್ಲ. ನಿಪಿ-7 ರಲ್ಲಿ ಇರುವ ಭಾವಚಿತ್ರದಂತೆ ಎಡಭಾಗದ ಗೋಡೆಯು ನಮಗೆ ಸೇರಿರುತ್ತದೆ. ಬಲ ಭಾಗದಲ್ಲಿರುವ ಗೋಡೆ ಹಾಗೂ ಸ್ವತ್ತು ರೇವಣ ಸಿದ್ಧಪ್ಪ ಹಾಗೂ ನಮಗೆ ಸೇರಿರುವ ಜಂಟಿ ಗೋಡೆ ಮತ್ತು ಅದರ ಮಧ್ಯಭಾಗದಲ್ಲಿ ಇರುವ ಜಾಗವು ನಮ್ಮ ಜಾಗದಲ್ಲಿ ಬರುತ್ತದೆ, ಅದನ್ನು ಸೇರಿ ನಾನು ಸ್ವತ್ತನ್ನು ಖರೀದಿ ಮಾಡಿರುತ್ತಾನೆ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಲಾದ ಕ್ರಯಪತ್ರದಲ್ಲಿ ಮಧ್ಯಭಾಗದಲ್ಲಿರುವ ಓಣಿಯ ಬಗ್ಗೆ ನಮೂದು ಮಾಡಿರುವುದಿಲ್ಲ, ಆದರೆ ಅಳತೆಯಲ್ಲಿ ಸದರಿ ಓಣಿಯೂ ಸಹ ಸೇರಿರುತ್ತದೆ ಎಂದು ನುಡಿಯುತ್ತಾರೆ. ಚೆಕ್ಕುಬಂದಿಯಲ್ಲಿ ಎಲ್ಲಿಯೂ ಸಹ ಓಣಿ ಇದೆ ಎಂಬುದನ್ನು ನಮೂದು ಮಾಡಿಲ್ಲ. ಸದರಿ ಓಣಿಯು ಸುಮಾರು 50-60 ವರ್ಷಗಳಿಂದ ಇದೆ. ನಿಪಿ-7 ರ ಭಾವಚಿತ್ರದಂತೆ ಎಡಭಾಗದ ಮೂಲೆಯಲ್ಲಿ ಶೌಚಾಲಯ ಬರುತ್ತದೆ ಎಂದು ಸಾಕ್ಷಿಯು  ನುಡಿಯುತ್ತಾರೆ. ಸದರಿ

ಶೌಚಾಲಯವನ್ನು ವಾದಿಯ ತಂದೆ ಹಾಗೂ 2 ರಿಂದ 4ನೇ ಪ್ರತಿವಾದಿಯರ ತಂದೆ ಇಬ್ಬರೂ ಉಪಯೋಗಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಸದರಿ ಶೌಚಾಲಯವೂ ಇಂದಿಗೂ ಸಹ ಇದೆ ಎಂದರೆ ಸರಿ. ನಿಪಿ-7 ರಂತೆ ಓಣಿಯೂ ಸಹ ಇಂದಿಗೂ ಇದೆ ಎಂದರೆ ಸರಿ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**